**ದಿಃ 09-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಎಂ ಟಿ ಎಸ್ ವಕೀಲರಿಂದ**

ವಾದಿಯ ತಂದೆ ಮೃತಪಟ್ಟು ಸುಮಾರು 14-15 ವರ್ಷ ಆಗಿರಬಹುದು. ವಾದಿಯರು ಈ ದಾವೆಯನ್ನು ಯಾವ ಆಸ್ತಿಗಳಿಗೆ ಸಂಬಂಧಿಸಿದಂತೆ ದಾಖಲಿಸಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ. ಬಸಪ್ಪ ಜೀವಂತ ಇದ್ದಾಗ ಅವರ ಮಾಲೀಕತ್ವದಲ್ಲಿ ಯಾವೆಲ್ಲಾ ಆಸ್ತಿಗಳು ಇದ್ದವು ಎಂದು ನನಗೆ ಅವುಗಳ ಸ.ನಂ. ಗೊತ್ತಿಲ್ಲ. ದಾವಾದ ಆಸ್ತಿಗಳು ಬಸಪ್ಪ ಮತ್ತು ಅವರ ಕುಟುಂಬಕ್ಕೆ ಸಂಬಂಧಿಸಿದ ಆಸ್ತಿಗಳು ಎಂದರೆ ಸರಿ. ದಾವಾದ ಆಸ್ತಿಗಳಲ್ಲಿ ಕೆಲವು ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಇದ್ದು ಕೆಲವು ಆಸ್ತಿಗಳನ್ನು ಪಿತ್ರಾರ್ಜಿತ ಆಸ್ತಿಗಳ ಆದಾಯದಿಂದ ಖರೀದಿಸಿರುತ್ತಾರೆ ಎಂದರೆ ಸರಿ. ಬಸಪ್ಪರವರಿಗೆ ನನಗೆ ತಿಳಿದಿರುವಂತೆ ವ್ಯವಸಾಯದ ಆದಾಯ ಬಿಟ್ಟು ಬೇರೆ ಆದಾಯ ಇರಲಿಲ್ಲ ಎಂದರೆ ಸರಿ. ಬಸಪ್ಪ ಮರಣ ಹೊಂದುವವರೆಗೆ ಅವರ ಮನೆತನದ ಯಜಮಾನಿಕೆಯನ್ನು ಅವರೇ ಮಾಡುತ್ತಿದ್ದರು ಎಂದರೆ ಸರಿ. ಬಸಪ್ಪ ಜೀವಂತ ಇದ್ದಾಗ ಮೃತ ವಾದಿ ಮತ್ತು 1 ನೇ ಪ್ರತಿವಾದಿಯು ಸರ್ಕಾರಿ ನೌಕರಿಯಲ್ಲಿದ್ದರು ಎಂದರೆ ಸರಿ. ಅವರು ಎಲ್ಲಿ ಕೆಲಸ ಮಾಡುತ್ತಿದ್ದರೋ ಅಲ್ಲಿಯೇ ವಾಸವಿರುತ್ತಿದ್ದರು ಎಂದರೆ ಸರಿ. ರಂಗಪ್ಪ ಮೃತಪಟ್ಟ ನಂತರ ಅವರ ಹೆಂಡತಿ ಮತ್ತು ಮಗಳು ಮಾತ್ರ ಅವರಿಗೆ ವಾರಸುದಾರರು ಎಂದರೆ ಸರಿ. ಬಸಪ್ಪ ಜೀವಂತ ಇದ್ದಾಗ ಅವರ ಮಕ್ಕಳ ನಡುವೆ ನನ್ನ ಸಮಕ್ಷಮ ಯಾವುದೇ ಪಾಲು ವಿಭಾಗ ಆಗಿಲ್ಲ ಎಂದರೆ ಸರಿ. ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ನನ್ನ ಮಾಹಿತಿಯ ಮೇರೆಗೆ ತಯಾರಿಸಿರುತ್ತಾರೆ. ಬಸಪ್ಪರವರು ಅವರ ಜೀವಿತಾವಧಿಯಲ್ಲಿ ತಮ್ಮ ಮರಣದ ನಂತರ ಅವರ ಮಕ್ಕಳ ನಡುವೆ ಕಲಃ ಬರಬಾರದು ಎನ್ನುವ ಉದ್ದೇಶದಿಂದ ಅವರ ಆಸ್ತಿಗಳನ್ನು ಅವರ ಗಂಡು ಮತ್ತು ಹೆಣ್ಣು ಮಕ್ಕಳಿಗೆ ನೋಂದಾಯಿತ ದಾಖಲೆ ಮುಖಾಂತರ ವರ್ಗಾಯಿಸಿರುತ್ತಾರೆ ಎಂದು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿದ್ದು, ಆ ಬಗ್ಗೆ ನಾನು ದಾಖಲೆಯನ್ನು ನೋಡಿಲ್ಲ. ಬಸಪ್ಪರವರು ನನಗೆ ಹೇಳಿದ್ದರ ಮೇರೆಗೆ ನಾನು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಸದರಿ ವಿಷಯವನ್ನು ಹೇಳಿ ಬರೆಯಿಸಿರುತ್ತೇನೆ. ಸದರಿ ವಿಷಯವನ್ನು ನನಗೆ ಬಸಪ್ಪರವರು ಸುಮಾರು 20 ವರ್ಷಗಳ ಹಿಂದೆ ಹೇಳಿದ್ದರು. ಬಸಪ್ಪರವರು ತಮ್ಮ 4 ಜನ ಗಂಡು ಮಕ್ಕಳಿಗೆ ಯಾವ ಯಾವ ಸರ್ವೆ ನಂಬರ್ ನ ಜಮೀನುಗಳನ್ನು ಕೊಟ್ಟಿರುತ್ತಾರೆ ಎಂದು ಗೊತ್ತಿಲ್ಲ. 4 ಜನ ಗಂಡು ಮಕ್ಕಳಿಗೆ ಎಷ್ಟೆಷ್ಟು ಜಮೀನುಗಳನ್ನು ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಬಸಪ್ಪನ 6 ಜನ ಹೆಣ್ಣು ಮಕ್ಕಳಿಗೆ ಆಸ್ತಿ ಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ಮೃತ ವಾದಿ ಮತ್ತು 1 ನೇ ಪ್ರತಿವಾದಿ ನೌಕರಿ ಮಾಡುವಾಗ 2 ಮತ್ತು 3 ನೇ ಪ್ರತಿವಾದಿಗಳು ಬಸಪ್ಪನ ಜೊತೆ ಕೊಡಿಕೊಂಡು ಜಮೀನು

ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿ. ನನ್ನ ಸಮಕ್ಷಮ ಬಸಪ್ಪರವರ ಕುಟುಂಬಕ್ಕೆ ಸಂಬಂಧಿಸಿದಂತೆ ನೋಂದಾಯಿತ ಪಾಲು ವಿಭಾಗ ಪತ್ರ ಆಗಿಲ್ಲ ಎಂದರೆ ಸರಿ.

ಬಸಪ್ಪರವರಿಗೆ ಸಂಬಂಧಿಸಿದಂತೆ ನಮ್ಮ ಊರಿನಲ್ಲಿ 1 ಕಪ್ಪು ಹಂಚಿನ ಮನೆ ಇರುತ್ತದೆ. ತೋಟದಲ್ಲಿ ಒಂದು ಮನೆ ಕಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಬೇರೆ ಆದ ನಂತರ ಮನೆ ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಮನೆಯನ್ನು 2 ಮತ್ತು 3 ನೇ ಪ್ರತಿವಾದಿಯರು ಕಟ್ಟಿರುತ್ತಾರೆ. ಆ ಮನೆಯನ್ನು ಕಟ್ಟಿ ಸುಮಾರು 14-15 ವರ್ಷಗಳು ಆಗಿರಬಹುದು. ಆ ಮನೆಯಲ್ಲಿಯೇ ಬಸಪ್ಪರವರು 2 ಮತ್ತು 3 ನೇ ಪ್ರತಿವಾದಿಯರ ಜೊತೆ ವಾಸವಿದ್ದರು ಎಂದರೆ ಸರಿ. ರಂಗಪ್ಪರವರು ನಿವೃತ್ತಿ ಹೊಂದಿದ ನಂತರ ನಮ್ಮ ಊರಿನಲ್ಲಿ ಬಂದು ನೆಲೆಸಿದ್ದರು ಎಂದರೆ ಸಾಕ್ಷಿಯು ಅವರು ಬಂದು ಹೋಗಿ ಮಾಡುತ್ತಿದ್ದರು ಆದರೆ ನೆಲೆಸಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಮೃತ ವಾದಿಯ ಹೆಂಡತಿಯು ಈಗ ಊರಲ್ಲಿ ಇರುವ ಕಪ್ಪು ಹಂಚಿನ ಮನೆಯಲ್ಲಿ ವಾಸವಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಈಗ ತೋರಿಸಿದ ಪೋಟೋದಲ್ಲಿರುವ ಮನೆಯೇ ನಮ್ಮ ಊರಿನಲ್ಲಿ ಇರುವ ಬಸಪ್ಪರವರ ಕಪ್ಪು ಹಂಚಿನ ಮನೆ ಇರುತ್ತದೆ ಎಂದರೆ ಸರಿ. ಸಾಕ್ಷಿ ಒಪ್ಪಿದ್ದರಿಂದ ಅದನ್ನು ನಿಪಿ.88 ಎಂದು ಗುರುತಿಸಲಾಯಿತು. ನಿಪಿ.88 ರಲ್ಲಿ ಇರುವ ಮನೆಯಲ್ಲಿ ಮೃತ ವಾದಿಯ ಹೆಂಡತಿ ವಾಸವಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ನಿಪಿ.88 ರ ಪೋಟೋದಲ್ಲಿ ಇರುವವರು ಮೃತ ವಾದಿಯ ಹೆಂಡತಿ ದ್ರಾಕ್ಷಾಯಣಮ್ಮ ಇರುತ್ತಾರೆ. ರಂಗಪ್ಪರವರು ನಿವೃತ್ತಿ ಹೊಂದಿದ ನಂತರ ಅವರು ತಮ್ಮ ಹೆಂಡತಿಯ ಜೊತೆ ನಮ್ಮ ಊರಿನಲ್ಲಿ ವಾಸವಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಬಸಪ್ಪ ಮೃತಪಟ್ಟ ನಂತರ ಅವರ ಮಕ್ಕಳ ನಡುವೆ ಹೊಂದಾಣಿಕೆ ಆಗದ ಕಾರಣ ವಾದಿ ಮತ್ತು 2 ಮತ್ತು 3 ನೇ ಪ್ರತಿವಾದಿಯರು ಪ್ರತ್ಯೇಕವಾಗಿ ವಾಸವಿದ್ದರು ಎಂದರೆ ಸರಿ. ವಾದಿ ಮತ್ತು 2 ಮತ್ತು 3 ನೇ ಪ್ರತಿವಾದಿಯರು ಇಂತಿಂಥ ಸರ್ವೆ ನಂಬರ್ ನ ಇಂತಿಷ್ಟು ಜಮೀನನ್ನು ಸಾಗುವಳಿ ಮಾಡುತ್ತಾರೆ ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ. ಆದರೆ ಬೇರೆ ಬೇರೆ ಸಾಗುವಳಿ ಮಾಡುತ್ತಾರೆ ಎಂದು ಸಾಕ್ಷಿ ನುಡಿಯುತ್ತಾರೆ. ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು 2 ನೇ ಪ್ರತಿವಾದಿಯು ತಯಾರಿಸಿದ್ದು ಅದಕ್ಕೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

**OS.No.**16/2020
**ಡಿ ಡಬ್ಲ್ಯೂ:2**

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.